ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ

Spl. NDPS 8/2020

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಮಾರುತಿ | ಪಿ.ಡಬ್ಲ್ಯೂ. | 3 |
| ತಂದೆಯ ಹೆಸರು | : | ಶಂಖಲಿಂಗಪ್ಪ | ಸಿ.ಡಬ್ಲ್ಯೂ. | 4 |
| ವಯಸ್ಸು | : | 42 ವರ್ಷ | | |
| ಉದ್ಯೋಗ | : | ಮನೋಸಾಮಾಜಿಕ ತಜ್ಞರು, ಸಿಜಿ ಆಸ್ಪತ್ರೆ ದಾವಣಗೆರೆ. | | |
| ವಾಸ ಸ್ಥಳ | : | ದಾವಣಗೆರೆ. | | |

ದಿ.03.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)** :

1. ನಾನು ಕಳೆದ 13 ವರ್ಷಗಳಿಂದ ಸಿಜಿ ಆಸ್ಪತ್ರೆಯಲ್ಲಿ ಮನೋಸಾಮಾಜಿಕ ತಜ್ಞರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ಚಾಸಾ.2 ಮತ್ತು ಚಾಸಾ.3 ರವರು ಸಹ ಸಿಜಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದರು. ದಿನಾಂಕ 26.12.2019 ರಂದು ನಾನು ಕರ್ತವ್ಯದಲ್ಲಿದ್ದಾಗ, ನಮ್ಮ ಅಧೀಕ್ಷಕರು ನಮ್ಮನ್ನು ಕರೆಸಿ, ಗಾಂಜಾ ಪ್ರಕರಣದಲ್ಲಿ ದಾಳಿ ಮಾಡಬೇಕಾಗಿದೆ ಎಂದು ನಮ್ಮನ್ನು ನೇಮಕ ಮಾಡಿದ್ದೇನೆಂದು ಸಹಕರಿಸಬೇಕೆಂದು ತಿಳಿಸಿದರು.

3. ನಂತರ ನಾನು ಪತ್ರಾಂಕಿತ ಅಧಿಕಾರಿಯಾಗಿ, ಚಾಸಾ.2 ಮತ್ತು ಚಾಸಾ.3 ರವರು ಮಹಜರು ಸಾಕ್ಷಿಯಾಗಿ ನಾವು ಸಿಎನ್ ಪೋಲೀಸ್ ಠಾಣೆಗೆ ಹೊದೆವು. ಅಲ್ಲಿ ಇನ್ಸಪೆಕ್ಟರ್ ರವರು ನಮಗೆ ಗಾಂಜಾ ದಾಳಿ ಮಾಡುವ ಬಗ್ಗೆ ಮಾಹಿತಿ ತಿಳಿಸಿದರು. ಪೋಲೀಸ್ ಠಾಣೆಯಲ್ಲಿ ಪೋಲೀಸ್ ಸಿಬ್ಬಂದಿಗಳೂ ಸಹ ಇದ್ದರು.

4. ಕೆ.ಎಸ್.ಆರ್.ಟಿ.ಸಿ ಹಿಂಭಾಗದ ಗಣೇಶ್ ಲೇಜೌಟ್ ನ 2 ನೇ ಕ್ರಾಸ್ ಬಳಿ ಅಕ್ರಮ ಗಾಂಜಾ ಮಾರಾಟ ಮಾಡುತ್ತಿರುತ್ತಾರೆಂದು ತಿಳಿಸಿದರು. ನಾವು ಎಲ್ಲಾ ಪರಿಕರಗಳೊಂದಿಗೆ ಅಂದರೆ ಲ್ಯಾಪ್

ಟಾಪ್, ಪ್ರಿಂಟರ್ ಮತ್ತು ತೂಕದ ಯಂತ್ರದೊಂದಿಗೆ ಸರ್ಕಾರಿ ವಾಹನದಲ್ಲಿ ಹೊದೆವು. ಅಲ್ಲಿ ಒಂದು ಮೂಲೆಯಲ್ಲಿ ಅಂದರೆ 100 ರಿಂದ 200 ಅಡಿ ದೂರದಲ್ಲಿ ವಾಹನವನ್ನು ನಿಲ್ಲಿಸಿ, ನಾವು ನಡೆದುಕೊಂಡು ಹೊದೆವು. ಅಲ್ಲಿ ಒಂದು ಗಿಡ ಬಳಿ ಮೂರು ಜನ ವ್ಯಕ್ತಿಗಳು ಗಾಂಜಾ ಮಾರಾಟ ಮಾಡುವುದು ಕಂಡು ಬಂತು.

5. ನಾವು ಮರೆಯಲಿ ನಿಂತು ನೊಡಲಾಗಿ ಅವರುಗಳ ಬಳಿ ಕೆಂಪು ಮತ್ತು ಹಳದಿ ಚೀಲಗಳು ಇದ್ದು, ಸದರಿ ಚೀಲಗಳಿಂದ ತೆಗೆದು ಪ್ಯಾಕೆಟ್ ಗಳನ್ನು ಕೊಡುತ್ತಿದ್ದರು. ಸದರಿ ಪ್ಯಾಕೇಟುಗಳು ಏನು ಎಂದು ನೋಡಿಕೊಂಡು ಬರುವಂತೆ ಚಾಸಾ.13 ರವರನ್ನು ರೂ.1000/- ಗಳನ್ನು ಗಾಂಜಾ ಖರೀದಿ ಮಾಡಿಕೊಂಡು ಬರುವಂತೆ ಚಾಸಾ.1 ರವರು (100 ರೂಪಾಯಿ ಮುಖಬೆಲೆಯ 10 ನೋಟುಗಳು) ಕೊಟ್ಟು ಕಳುಹಿಸಿದರು.

6. ಅದರಂತೆ ಚಾಸಾ.13 ರವರು ಎರಡು ಪ್ಯಾಕೇಟ್ ಗಳನ್ನು ಖರೀದಿಸಿ ತಂದು ಚಾಸಾ.1 ರವರಿಗೆ ಕೊಟ್ಟರು. ಸದರಿ ಪ್ಯಾಕೇಟ್ ಗಳಲ್ಲಿ ಹೂವು ಮತ್ತು ಮೊಗ್ಗು ಇದ್ದು ವಾಸನೆ ಬರುತ್ತಿದ್ದು, ಅದು ಗಾಂಜಾ ಎಂದು ತಿಳಿದು ಬಂತು. ನಂತರ ಎಂಟು ಜನ ಪೋಲೀಸರು ಆರೋಪಿತರನ್ನು ಹಿಡಿಯಲು ಹೊದೆವು. ಸದರಿ ವ್ಯಕ್ತಿಗಳು ಓಡಿ ಹೋಗಲು ಪ್ರಯತ್ನಿಸಿದರು. ಅವರನ್ನು ಸುತ್ತುವರೆದು ಹಿಡಿದುಕೊಂಡರು.

7. ಸದರಿ ವ್ಯಕ್ತಿಗಳ ಹೆಸರು ಮತ್ತು ವಿಳಾಸ ಕೇಳಲಾಗಿ ಅವರುಗಳು ರೇವಣಸಿದ್ದಪ್ಪ (1 ನೇ ಆರೋಪಿ), ಸತೀಶ್ ಬಾಬುರಾವ್ (2 ನೇ ಆರೋಪಿ) ಮತ್ತು ಲೋಕೇಶ್ (3 ನೇ ಆರೋಪಿ) ಎಂದು ತಿಳಿಸಿದರು. ಅವರುಗಳನ್ನು ಏನು ಮಾಡುತ್ತಿದ್ದೀರಾ ಎಂದು ಕೇಳಲಾಗಿ ಅವರು ಗಾಂಜಾ ಮಾರಾಟ ಮಾಡುತ್ತಿರುವುದಾಗಿ ತಿಳಿಸಿದರು. ಸದರಿ ಗಾಂಜಾವನ್ನು ಹಾವೇರಿ ಜಿಲ್ಲೆಯ ಫಕೀರ್ ಎಂಬ ವ್ಯಕ್ತಿಯಿಂದ ತಂದಿದ್ದೇವೆಂದು ತಿಳಿಸಿದರು.

8. 1 ನೇ ಆರೋಪಿಯ ಅಂಗಶೋಧನೆ ಮಾಡಲಾಗಿ ಅವರ ಬಳಿ ಕೆಂಪು ಮತ್ತು ಹಳದಿ ಮಿಶ್ರಿತ ಬಟ್ಟೆ ಚೀಲ ಇದ್ದು, ಸದರಿ ಚೀಲದಲ್ಲಿ 32 ಗಾಂಜಾ ಪ್ಯಾಕೇಟ್ ಗಳು ಇದ್ದವು. 2 ನೇ ಆರೋಪಿಯ ಬಳಿ ಕೆಂಪು ಬಣ್ಣದ ಚೀಲ ಇದ್ದು, ಸದರಿ ಚೀಲದಲ್ಲಿಯೂ ಸಹ ಗಾಂಜಾ ಇತ್ತು. 1 ನೇ ಆರೋಪಿ ಬಳಿ ಸಿಕ್ಕ

ಗಾಂಜಾವನ್ನು ತೂಕ ಮಾಡಲಾಗಿ 280 ಗ್ರಾಂ ಇತ್ತು. ಸಾಕ್ಷಿಯು ಪುನಃ ಹೇಳುತ್ತಾರೆ ಈಗ ತನಗೆ ಸರಿಯಾಗಿ ಜ್ಞಾಪಕ ಆಗುತ್ತಿಲ್ಲ ಎಂದು ಹೇಳುತ್ತಾರೆ. 2 ನೇ ಆರೋಪಿಯ ಬಳಿ 780 ಗ್ರಾಂ ಗಾಂಜಾ ಇತ್ತು.

9. 1 ನೇ ಆರೋಪಿಯ ಅಂಗಶೋಧನೆ ಮಾಡಲಾಗಿ ಆತನ ಬಳಿ 100 ರೂಪಾಯಿ ಮುಖಬೆಲೆಯ 10 ನೋಟುಗಳು ಇತ್ತು. ಸದರಿ ನೋಟುಗಳು ಗಾಂಜಾ ಮಾರಾಟ ಮಾಡಿ ಬಂದ ನೋಟುಗಳು ಎಂದು 1 ನೇ ಆರೋಪಿ ತಿಳಿಸಿದನು.

10. ವಶಪಡಿಸಿಕೊಂಡ ಗಾಂಜಾಗಳನ್ನು ಪ್ಯಾಕ್ ಮಾಡಿ ಅರಗಿನಿಂದ ಸೀಲ್ ಮಾಡಿ ನಮ್ಮ ಸಹಿ ಪಡೆದುಕೊಂಡರು. ಈ ಪ್ರಕ್ರಿಯೆ ಸುಮಾರು 2 ವರೆ ಗಂಟೆಗಳ ವರೆಗೆ ಆಗಿರುತ್ತದೆ. ಈ ಬಗ್ಗೆ ನಿಪಿ.10 ರಂತೆ ಮಹಜರ್ ಬರೆದಿದ್ದು, ನಿಪಿ.10 ರಲ್ಲಿ ಸಾಕ್ಷಿಯ ಸಹಿಯನ್ನು **ನಿಪಿ.10(ಎಫ್)** ಎಂದು ಗುರುತಿಸಲಾಯಿತು. ಈಗಾಗಲೇ ಎಂ.ಓ.1, 3 ಮತ್ತು 4 ಎಂದು ಗುರುತಿಸಲಾದ ವಸ್ತುಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ನೋಟುಗಳನ್ನು ಈಗಾಗಲೇ ಎಂ.ಓ.2 ಎಂದು ಗುರುತಿಸಲಾಗಿದೆ.

11. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರನ್ನು ಸಾಕ್ಷಿಯು ನೋಡಿ ಗುರುತಿಸುತ್ತಾರೆ. ನಿಪಿ.11 ರಿಂದ ನಿಪಿ.21 ಎಂದು ಗುರುತಿಸಲಾದ ಪೊಟೋಗಳಲ್ಲಿ ಸಾಕ್ಷಿಯು ಗಾಂಜಾ, ಆರೋಪಿತರು, ಪೋಲೀಸ್ ಸಿಬ್ಬಂದಿ ಮತ್ತು ಮಹಜರ್ ಸಾಕ್ಷಿಗಳು ಕಂಡು ಬರುತ್ತಾರೆಂದು ನುಡಿಯುತ್ತಾರೆ. ಎಂ.ಓ.1 ರಲ್ಲಿ ಸಾಕ್ಷಿಯು ತನ್ನ ಸಹಿ ಇದೆ ಎಂದು ಗುರುತಿಸುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯವನ್ನು ಕೊಡುತ್ತಿರುವ ಕಾರಣ ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸರ್ಕಾರಿ ಅಭಿಯೋಜಕರು ಕೋರಿರುತ್ತಾರೆ. ವಾದ ಕೇಳಿ ದಾಖಲೆ ಪರಿಶೀಲಿಸಿ ಅನುಮತಿ ಕೊಡಲಾಯಿತು.)

**ಪಾಟೀ ಸವಾಲು : ಮಾನ್ಯ ಸರ್ಕಾರಿ ಅಭಿಯೋಜಕರಿಂದ** :

12. ಚಾಸಾ.1 ರವರು ಚಾಸಾ.13 ರವರಿಗೆ 100 ರೂಪಾಯಿ ಮುಖಬೆಲೆಯ ಐದು ನೋಟುಗಳನ್ನು ಕೊಟ್ಟು ಕಳುಹಿಸಿದ್ದರು ಎಂದರೆ ಸರಿ. 1 ನೇ ಆರೋಪಿಯ ಬಳಿ ಸಿಕ್ಕಂತಹ ಗಾಂಜಾ ಒಟ್ಟು ತೂಕ 218 ಗ್ರಾಂ

ಎಂದರೆ ಸರಿ. ಚಾಸಾ.13 ರವರು 1 ನೇ ಆರೋಪಿಯಿಂದ ಖರೀದಿಸಿ ತಂದ ಪ್ಯಾಕೇಟ್ ಗಳಲ್ಲಿ ಒಟ್ಟು 12 ಗ್ರಾಂ ಗಾಂಜಾ ಇತ್ತು ಎಂದರೆ ಸರಿ.

**<u>ಪಾಟೀ ಸವಾಲು : ಶ್ರೀ ಕೆ.ಎಚ್.ವಿ, ವಕೀಲರಿಂದ ಆರೋಪಿತರ ಪರವಾಗಿ</u>** :

13. ನಾನು ದಾವಣಗೆರೆ ಸಿಜಿ ಆಸ್ಪತ್ರೆಯಲ್ಲಿ 13 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನಾನು ದಾವಣಗೆರೆಯಲ್ಲಿಯೇ ವಾಸ ಮಾಡುತ್ತಿದ್ದೇನೆ. ನಾನು ದಾವಣಗೆರೆಯಲ್ಲಿಯೇ ವಾಸ ಮಾಡುತ್ತಿದುದ್ದರಿಂದ ಕೆ.ಟಿ.ಜೆ ನಗರ ಪೋಲೀಸ್ ಠಾಣೆ, ಕೆ.ಎಸ್.ಆರ್.ಟಿ.ಸಿ ಬಸ್ಸ್ ನಿಲ್ದಾಣ ಮತ್ತು ವಿದ್ಯಾನಗರ ಪೋಲೀಸ್ ಠಾಣೆ ಎಲ್ಲಿ ಇವೆ ಎಂಬುದು ನನಗೆ ಚೆನ್ನಾಗಿ ಗೊತ್ತಿದೆ ಎಂದರೆ ಸರಿ.

14. ಈ ಪ್ರಕರಣದಲ್ಲಿ ಪೋಲೀಸರು ದಿನಾಂಕ 26.12.2019 ರಂದು ಸ್ಥಳದಲ್ಲಿಯೇ ನನ್ನ ಹೇಳಿಕೆಯನ್ನು ಪಡೆದಿದ್ದಾರೆ. ಸಿಇಎನ್ ಪೋಲೀಸ್ ರವರು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ. ನನ್ನ ಮೇಲಾಧಿಕಾರಿ ಅಂದರೆ ಅಧೀಕ್ಷಕರು ಡಾಃ ನಾಗರಾಜ್ ಇದ್ದರು. ನನ್ನ ಮೇಲಾಧಿಕಾರಿ ನಮ್ಮನ್ನು ಅಧೀಕ್ಷಕರ ಕೊಠಡಿಗೆ ಕರೆಸಿದ್ದರು. ನಮ್ಮನ್ನು ಅಧೀಕ್ಷಕರ ಕೊಠಡಿಗೆ ಕರೆಸಿದಾಗ ಮಧ್ಯಾಹ್ನ 12 ಗಂಟೆಯಾಗಿರಬಹುದು. ನಮ್ಮನ್ನು ನೇಮಕಾತಿ ಮಾಡಿದ್ದೇವೆಂದು ಅಧೀಕ್ಷಕರು ಜ್ಞಾಪನಾ ಪತ್ರ ಕೊಟ್ಟಿದ್ದಾರೆ. ಸದರಿ ಪತ್ರದಲ್ಲಿ ಸಮಯವನ್ನು ನಮೂದಿಸಿದ್ದಾರೆ.

15. ನಮ್ಮ ಸಿಜಿ ಆಸ್ಪತ್ರೆಯಿಂದ ವಿದ್ಯಾನಗರ ಪೋಲಿಸ್ ಠಾಣೆ ಎಷ್ಟು ದೂರ ಇದೆ ಎಂದು ನನಗೆ ಹೇಳಲಿಕ್ಕಾಗುವುದಿಲ್ಲ. ಸಿಜಿ ಆಸ್ಪತ್ರೆಯಿಂದ ವಿದ್ಯಾನಗರ ಪೋಲೀಸ್ ಠಾಣೆಗೆ ಪೊಲೀಸರ ವಾಹನದಲ್ಲಿ ಹೊದೆವು. ಪೊಲೀಸ್ ವಾಹನ ನಮ್ಮನ್ನು ಕರೆದುಕೊಂಡು ಹೋಗಲು ನಮ್ಮ ಸಿಜಿ ಆಸ್ಪತ್ರೆಗೆ ಬಂದಿತು. ಸಿಜಿ ಆಸ್ಪತ್ರೆಯಿಂದ ವಿದ್ಯಾನಗರ ಪೋಲೀಸ್ ಠಾಣೆಗೆ ಹೋಗಲು 15 ರಿಂದ 20 ನಿಮಿಷ ಆಗಿರಬಹುದು.

16. ವಿದ್ಯಾನಗರ ಪೋಲೀಸ್ ಠಾಣೆಯಿಂದ ಮಹಜರ್ ಮಾಡಿದ ಸ್ಥಳ ಅಂದರೆ ಕೆ.ಎಸ್.ಆರ್.ಟಿ.ಸಿ ಬಸ್ಸ್ ನಿಲ್ದಾಣದ ಹಿಂಭಾಗಕ್ಕೆ ಹೊದೆವು. ವಿದ್ಯಾನಗರ ಪೋಲೀಸ್ ಠಾಣೆಯಿಂದ ಕೆ.ಎಸ್.ಆರ್.ಟಿ.ಸಿ ಬಸ್ಸ್ ನಿಲ್ದಾಣದ ಹಿಂಭಾಗಕ್ಕೆ ಹೋಗಲು 15 ನಿಮಿಷ್ಯ ಆಗಿರಬಹುದು. ಅಲ್ಲಿ ಇದ್ದ ಇಂದಿರಾ ಕ್ಯಾಂಟಿನ್ ಹತ್ತಿರ ಜೀಪನ್ನು ನಿಲ್ಲಿಸಿದೇವು. ಆರೋಪಿಗಳು ನಾವು ನಿಂತಿದ್ದ ಸ್ಥಳದಿಂದ ಸುಮಾರು 100 ರಿಂದ 200

ಅಡಿ ದೂರದಲ್ಲಿ ನಿಂತಿದ್ದರು. ಆರೋಪಿತರು ಏನು ಮಾಡುತ್ತಿದ್ದರು ಎಂದು ನಮಗೆ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಸದರಿ ಮೂವರು ವ್ಯಕ್ತಿಗಳು ಹತ್ತಿರ ಹತ್ತಿರವೇ ನಿಂತಿದ್ದರು. ಮೂರು ವ್ಯಕ್ತಿಗಳನ್ನು ನಾವು ಸುಮಾರು 5 ನಿಮಿಷ್ಯಗಳ ಕಾಲ ಗಮನಿಸಿದೆವು. ಸದರಿ ಮೂರು ವ್ಯಕ್ತಿಗಳಿಂದ 5 ನಿಮಿಷ್ಯದ ಅವಧಿಯಲ್ಲಿ ಇಬ್ಬರು ಮೂವರು ವ್ಯಕ್ತಿಗಳು ಪ್ಯಾಕೇಟ್ ಗಳನ್ನು ಖರೀದಿ ಮಾಡಿದರು. ಖರೀದಿ ಮಾಡಿದ ಸದರಿ ಇಬ್ಬರು ಮೂವರು ವ್ಯಕ್ತಿಗಳನ್ನು ಪೋಲೀಸರು ಹಿಡಿಯಲು ಪ್ರಯತ್ನಿಸಿಲ್ಲ.

17. ಸದರಿ ಮೂರು ಜನ ಆರೋಪಿತರು ಜನರನ್ನು ಬನ್ನಿ ಬನ್ನಿ ಗಾಂಜಾ ಪ್ಯಾಕೇಟ್ ಇದೆ ಎಂದು ಕರೆಯುತ್ತಿರಲಿಲ್ಲ. ಸದರಿ ಮೂವರು ವ್ಯಕ್ತಿಗಳು ಆಶೋಕ ಹೋಟೇಲ್ ಮುಂದಿನ ರಸ್ತೆಯಲ್ಲಿ ನಿಂತಿದ್ದರು. ಸದರಿ ರಸ್ತೆಯಲ್ಲಿ ಸದಾ ಕಾಲ ವಾಹನಗಳು ತಿರುಗಾಡುತ್ತಿರುತ್ತವೆ ಎಂದರೆ ಸರಿ. ಆಶೋಕ ಹೋಟೇಲ್‌ನ 200 ಮೀಟರ್ ಸುತ್ತಳತೆಯಲ್ಲಿ ಹಲವಾರು ಅಂಗಡಿಗಳು ಮತ್ತು ಬಾರ್ ಗಳು ಇದೆ ಎಂದರೆ ಸರಿ.

18. ಇಬ್ಬರು ಆರೋಪಿತರ ಬಳಿ ಕೆಂಪು ಮತ್ತು ಹಳದಿ ಬ್ಯಾಗ್ ಗಳು ಇದ್ದವು. ಚಾಸಾ.13 ರವರಿಗೆ ಚಾಸಾ.1 ರವರು ಹಣ ಕೊಟ್ಟರು. ಸದರಿ ನೋಟುಗಳಿಗೆ ಗುರುತು ಮಾಡಿ ಕೊಟ್ಟರೋ ಎಂದರೆ ಸಾಕ್ಷಿಯು ತಾನು ಗಮನಿಸಿಲ್ಲ ಎಂದು ಹೇಳುತ್ತಾರೆ. ಸದರಿ ನೋಟುಗಳು ಹಳೆಯ ನೋಟುಗಳೋ ಅಥವಾ ಹೊಸ ನೋಟುಗಳೋ ಎಂದು ನನಗೆ ಹೇಳಲಿಕ್ಕಾಗುವುದಿಲ್ಲ. ಚಾಸಾ.13 ರವರು ನೋಟುಗಳನ್ನು ಪಡೆದು ಪ್ಯಾಕೇಟ್ ಗಳನ್ನು ಖರೀದಿ ಮಾಡಿ ತಕ್ಷಣವೇ ಬಂದರು.

19. ಚಾಸಾ.13 ರವರು 1 ನೇ ಆರೋಪಿಯಿಂದ ಪ್ಯಾಕೇಟ್ ಗಳನ್ನು ಖರೀದಿ ಮಾಡಿದರು. 1 ನೇ ಆರೋಪಿ ತನ್ನ ಬಳಿ ಇದ್ದ ಕೆಂಪು ಚೀಲದಿಂದ ಪ್ಯಾಕೇಟ್ ಗಳನ್ನು ತೆಗೆದು ಚಾಸಾ.13 ರವರಿಗೆ ಖರೀದಿಗೆ ಕೊಟ್ಟರು. ಸದರಿ ಪ್ಯಾಕೇಟ್ ಗಳು ಮುಚ್ಚಿದ್ದವು. ಸದರಿ ಪ್ಯಾಕೇಟುಗಳನ್ನು ಕೈಯಿಂದಲೇ ತೆರೆದರು. ಕೈಯಿಂದ ಪ್ಯಾಕೇಟ್ ಗಳನ್ನು ತೆರೆದರೆ ಪ್ಯಾಕೇಟ್ ನಲ್ಲಿದ್ದ ವಸ್ತುಗಳು ಚೆಲ್ಲಿ ಹೋಗುತ್ತವೆ ಎಂದರೆ ಸರಿಯಲ್ಲ.

20. ಈ ಪ್ರಕರಣಕ್ಕೂ ಹಿಂದೆ ನಾನು ಗಾಂಜಾ ಪ್ರಕರಣದಲ್ಲಿ ಸಾಕ್ಷಿಯಾಗಿದ್ದೆ. ಗಾಂಜಾ ಪ್ರಕರಣಗಳಲ್ಲಿ

ಸಾಕ್ಷಿಯನ್ನಾಗಿ ಪೋಲೀಸರು ನನ್ನನ್ನೆ ಕರೆಯುತ್ತಾರೆ ಎನ್ನುವುದು ಸರಿಯಲ್ಲ. ಸಾಕ್ಷಿಯು ಮುಂದುವರೆದು ಅದು ರೊಟೇಷನ್ ಪ್ರಕಾರ ಕರೆಯುತ್ತಾರೆಂದು ಹೇಳುತ್ತಾರೆ.

21. ಚಾಸಾ.13 ರವರು ತಂದಿದ್ದ ಪ್ಯಾಕೇಟ್‌ಗಳು ಪ್ರತಿ ಪ್ಯಾಕೇಟ್‌ಗಳು ಎಷ್ಟು ಗ್ರಾಂ ಇದ್ದವು ಎಂದು ಗೊತ್ತಿಲ್ಲ. ಪೋಲೀಸರು ಒಂದೊಂದೆ ಪ್ಯಾಕೇಟನ್ನು ತೂಕ ಮಾಡಿಲ್ಲ. 2 ನೇ ಮತ್ತು 3 ನೇ ಆರೋಪಿತರ ಬಳಿ ಎಷ್ಟೇಷ್ಟು ಪ್ಯಾಕೇಟ್ ಗಳು ಇದ್ದವು ಎಂದು ನನಗೆ ಹೇಳಲಿಕ್ಕಾಗುವುದಿಲ್ಲ. ಎಂ.ಓ.1 ರ ಪ್ಯಾಕೇಟ್ ಮೇಲೆ ನಾನು ವಿದ್ಯಾನಗರ ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಸ್ಥಳದಲ್ಲಿ ಸಹಿ ಮಾಡಿದ್ದೇನೆಂದು ಹೇಳುತ್ತಾರೆ.

22. ವಶಪಡಿಸಿಕೊಂಡ ಎಲ್ಲಾ ಪ್ಯಾಕೇಟ್ ಗಳನ್ನು ತೆರೆದು ನೋಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಒಂದೇರಡು ಪ್ಯಾಕೇಟ್ ಗಳನ್ನು ಮಾತ್ರ ತೆರೆದು ನೋಡಿದ್ದಾರೆಂದು ಹೇಳುತ್ತಾರೆ. ಮೂರು ವ್ಯಕ್ತಿಗಳು ನಿಂತು ಮಾರಾಟ ಮಾಡುತ್ತಿರುವುದರ ಪೊಟೋ ತೆಗೆದುಕೊಂಡಿಲ್ಲ. ಚಾಸಾ.13 ರವರು ಹಣ ಕೊಟ್ಟು ಖರೀದಿ ಮಾಡಿದ ಸಂದರ್ಭವನ್ನು ಪೊಟೋ ತೆಗೆದುಕೊಂಡಿಲ್ಲ.

23. ನಿಪಿ.11 ರಿಂದ ನಿಪಿ.21 ರ ಪೊಟೋಗಳಲ್ಲಿ ಅಶೋಕ ಹೋಟೇಲ್ ಅಥವಾ ಇಂದಿರಾ ಕ್ಯಾಂಟಿನ್ ಕಾಣಿಸುವುದಿಲ್ಲ. ಸಿಇಎನ್ ಪೋಲೀಸ್ ಠಾಣೆ ವಿದ್ಯಾನಗರ ಪೋಲೀಸ್ ಠಾಣೆಯ ಮಹಡಿಯಲ್ಲಿ ಇದೆ ಎಂದರೆ ಸರಿ. ವಿದ್ಯಾನಗರ ಪೋಲೀಸ್ ಠಾಣೆಯ ಆವರಣದಲ್ಲಿ ಪೊಟೋಗಳಲ್ಲಿ ಕಂಡು ಬರುವಂತೆ ಮರಗಳು ಮತ್ತು ರಸ್ತೆ ಇವೆ ಎಂದರೆ ಸರಿ.

24. ವಿದ್ಯಾನಗರ ಠಾಣೆಯ ಆವರಣದಲ್ಲಿ ನಾವೇಲ್ಲಾರೂ ನಿಂತು ನಿಪಿ.11 ರಿಂದ ನಿಪಿ.21 ರ ಪೊಟೋಗಳನ್ನು ತೆಗೆಸಿರುತ್ತೇವೆ ಎಂದರೆ ಸರಿಯಲ್ಲ. ಓಡಿ ಹೋಗಲು ಪ್ರಯತ್ನ ಪಟ್ಟ ಆರೋಪಿತರ ಪೈಕಿ ಯಾವ ಯಾವ ಆರೋಪಿತರನ್ನು ಯಾವ ಯಾವ ಸಿಬ್ಬಂದಿ ಹಿಡಿದುಕೊಂಡರು ಎಂದರೆ ಸಾಕ್ಷಿಯು ಎಲ್ಲಾ ಸಿಬ್ಬಂದಿಗಳು ಅವರುಗಳನ್ನು ಸುತ್ತುವರೆದುಕೊಂಡು ಹಿಡಿದುಕೊಂಡರು ಎಂದು ಹೇಳುತ್ತಾರೆ.

25. ಚಾಸಾ.13 ರವರನ್ನು ನೋಡಿ ಸದರಿ ಮೂರು ವ್ಯಕ್ತಿಗಳು (ಆರೋಪಿತರು) ಓಡಿ ಹೋಗಲು ಪ್ರಯತ್ನಪಟ್ಟಿಲ್ಲ. ಸಾಕ್ಷಿಯು ಮುಂದುವರೆದು ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನ ಪಟ್ಟರು. ನಾವಾಗಲೀ ಪೋಲೀಸರಾಗಲೀ ಆ ದಿನ ಸದರಿ ಸ್ಥಳಕ್ಕೆ ಹೋಗಿಯೇ ಇಲ್ಲ ಎಂದರೆ ಸರಿಯಲ್ಲ. ಆರೋಪಿತರು ಸದರಿ ಸ್ಥಳದಲ್ಲಿ ಯಾವುದೇ ವಸ್ತುಗಳನ್ನು ಮಾರಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಆ ದಿನ ನಾವು ಯಾವುದೇ ವ್ಯಕ್ತಿಗಳನ್ನು ಹಿಡಿದುಕೊಂಡಿಲ್ಲ ಎಂದರೆ ಸರಿಯಲ್ಲ. ಅಲ್ಲಿ ಯಾವುದೇ ಮಹಜರ ಮಾಡಿಲ್ಲ ಎಂದರೆ ಸರಿಯಲ್ಲ.

26. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಪೋಲೀಸರು ಹೇಳಿ ಕೊಟ್ಟಿದ್ದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಮೂರು ವ್ಯಕ್ತಿಗಳು ಯಾವ ಯಾವ ಬಟ್ಟೆಗಳು ಧರಿಸಿದ್ದರು ಎಂದರೆ ಸಾಕ್ಷಿಯು ಒಬ್ಬ ವ್ಯಕ್ತಿ ಪಂಚೆ ಮತ್ತು ಶರ್ಟ್ ಧರಿಸಿದ್ದ, ಇನ್ನು ಇಬ್ಬರು ಯಾವ ಬಟ್ಟೆ ಧರಿಸಿದ್ದರು ಎಂದು ಈಗ ಜ್ಞಾಪಕ ಬರುತ್ತಿಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆ** ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ .

(ರಾಜೇಶ್ವರಿ ಎನ್. ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.